ನಿಮ್ಮೊಡನೆ

# ದುರಂತದ ಪಾಠಗಳು ಮಳೆ ದಿನಗಳಿಗಷ್ಟೇ ಅಲ್ಲ, ಸರ್ಕಾರ-ಸಮಾಜ ಇನ್ನಾದರೂ ಎಚ್ಚರ ತಪ್ಪದಿರಲಿ

**ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಅದರ ಹೊಣೆಗಾರಿಕೆ ನೆನಪಾಗಲು ಪ್ರಾಕೃತಿಕ ದುರಂತಗಳು ನಡೆಯಲೇಬೇಕು ಎನ್ನುವ ಸ್ಥಿತಿ ಕೊನೆಯಾಗಬೇಕು. ಪರಿಸರ ಸಂರಕ್ಷಣೆ ವರ್ತಮಾನದ ಅಗತ್ಯ ಮಾತ್ರವಲ್ಲ, ನಾಳೆಯ ತಲೆಮಾರುಗಳ ಭವಿಷ್ಯಕ್ಕಾಗಿ ನಾವು ಇಂದು ನಿರ್ವಹಿಸಲೇಬೇಕಾದ ಹೊಣೆಗಾರಿಕೆ.**

ಅರಣ್ಯ ಒತ್ತುವರಿ ಪ್ರದೇಶವನ್ನು ತೆರವುಗೊಳಿಸುವ ಹಾಗೂ ಕಾಡು ಕಡಿಮೆ ಇರುವ ಪ್ರದೇಶದಲ್ಲಿ ಹೆಚ್ಚಿನ ಸಸಿಗಳನ್ನು ನೆಡಲು ಮುಂದಾಗಿರುವ ರಾಜ್ಯ ಸರ್ಕಾರದ ಪ್ರಯತ್ನ ಸ್ವಾಗತಾರ್ಹ. ರಾಜ್ಯದ ಕೆಲವೆಡೆಗಳಲ್ಲಿನ ಭೂಕುಸಿತ ಹಾಗೂ ಕೇರಳದ ವಯನಾಡ್‌ನಲ್ಲಿನ ಗುಡ್ಡ ಕುಸಿತ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ, ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ವಿಳಂಬವಾಗಿಯಾದರೂ ಕಾರ್ಯಪ್ರವೃತ್ತವಾದಂತಿದೆ.


ರಾಜ್ಯದ ಹತ್ತು ಜಿಲ್ಲೆಗಳ ವ್ಯಾಪ್ತಿಯಲ್ಲಿ ಹರಡಿಕೊಂಡಿರುವ ಪಶ್ಚಿಮ ಘಟ್ಟಗಳ ಪರಿಸರದಲ್ಲಿ ನಡೆದಿರುವ ಒತ್ತುವರಿಗಳನ್ನು ತೆರವುಗೊಳಿಸಲು ವಿಶೇಷ ಕಾರ್ಯಪಡೆಯೊಂದನ್ನು ರಚಿಸಲು ಸರ್ಕಾರ ಮುಂದಾಗಿದೆ. ಈ ಕಾರ್ಯಪಡೆ ಅಸ್ತಿತ್ವಕ್ಕೆ ಬಂದು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದರೆ, ರಾಜ್ಯದ ಪರಿಸರ ಸೂಕ್ಷ್ಮ ಪ್ರದೇಶದ ಸಂರಕ್ಷಣೆಯ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯೊಂದನ್ನು ಇರಿಸಿದಂತಾಗುತ್ತದೆ. ಕರ್ನಾಟಕ ಮಾತ್ರವಲ್ಲದೆ, ತಮಿಳುನಾಡು, ಕೇರಳ, ಗೋವಾ, ಮಹಾರಾಷ್ಟ್ರ ಹಾಗೂ ಗುಜರಾತ್‌ನಲ್ಲಿ 1600 ಕಿ.ಮೀ.ಗೂ ಹೆಚ್ಚಿನ ಪ್ರದೇಶದಲ್ಲಿ ವಿಸ್ತರಿಸಿಕೊಂಡಿರುವ ಪಶ್ಚಿಮ ಘಟ್ಟಗಳು ಈ ದೇಶದ ಅಮೂಲ್ಯ ಜೀವಪೋಷಕಗಳಾಗಿವೆ. ಅನೇಕ ನದಿಗಳ ಉಗಮಸ್ಥಾನವೂ ಆಗಿರುವ ಘಟ್ಟಗಳು, ಜೀವವೈವಿಧ್ಯದ ತೊಟ್ಟಿಲುಗಳೂ ಆಗಿವೆ. ಯುನೆಸ್ಕೋದ 'ವಿಶ್ವ ಪರಂಪರೆ ಪಟ್ಟಿ'ಯಲ್ಲಿ ಸ್ಥಾನ ಪಡೆದಿರುವ ಪಶ್ಚಿಮ ಘಟ್ಟಗಳು ಸ್ಥಳೀಯರ ಮನಸ್ಸಿನಲ್ಲಿ ಇನ್ನಾದರೂ ಸ್ಥಾನ ಪಡೆಯಬೇಕಾಗಿದೆ.

ರಾಜ್ಯದ ಅರಣ್ಯ ಪ್ರದೇಶದಲ್ಲಿ ಗಣನೀಯ ಪಾಲನ್ನು ಹೊಂದಿರುವ ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅರಣ್ಯ ಒತ್ತುವರಿ ಪ್ರಮಾಣವೂ ಹೆಚ್ಚಾಗಿದೆ. 2000 ಎಕರೆಗೂ ಹೆಚ್ಚಿನ ಅರಣ್ಯ ಪ್ರದೇಶದ ಒತ್ತುವರಿ ರಾಜ್ಯದಲ್ಲಿ ನಡೆದಿದೆ ಎನ್ನಲಾಗಿದ್ದು, ಈ ಒತ್ತುವರಿಗಳನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಈವರೆಗಿನ ಪ್ರಯತ್ನಗಳು ಅಲ್ಪಾಯುಷಿಗಳೇ ಆಗಿವೆ. 2018ರಲ್ಲಿ ಕೊಡಗಿನಲ್ಲಿ ಭಾರೀ ದುರಂತ ನಡೆದ ಸಂದರ್ಭದಲ್ಲಿ ಒತ್ತುವರಿ ತೆರವುಗೊಳಿಸುವ ಮಾತುಗಳು ಕೇಳಿಬಂದಿದ್ದವು. ಆದರೆ, ನಂತರದ ದಿನಗಳಲ್ಲಿ ರೆಸಾರ್ಟ್, ಹೋಮ್‌ಸ್ಟೇ, ಕಟ್ಟಡಗಳ ಸಂಖ್ಯೆ ಹೆಚ್ಚಾದವೇ ಹೊರತು, ಅವುಗಳನ್ನು ನಿಯಂತ್ರಿಸುವ ಪ್ರಯತ್ನಗಳು ಪರಿಣಾಮಕಾರಿಯಾಗಿ ನಡೆಯಲಿಲ್ಲ. ಕಳೆದ ವರ್ಷ 42 ಲಕ್ಷಕ್ಕೂ ಹೆಚ್ಚಿನ ಪ್ರವಾಸಿಗರು ಕೊಡಗಿಗೆ ಭೇಟಿ ಕೊಟ್ಟಿದ್ದರು ಎನ್ನುವ ಅಂಕಿಅಂಶಗಳೇ ನಮ್ಮ ಆದ್ಯತೆ ಯಾವುದಕ್ಕೆ ಎನ್ನುವುದನ್ನು ಸೂಚಿಸುವಂತಿವೆ. ಕೃಷಿ ಭೂಮಿಯನ್ನು ವಾಣಿಜ್ಯ ಚಟುವಟಿಕೆಗಳಿಗೆ ಬಳಸುತ್ತಿರುವ ಉದಾಹರಣೆಗಳಿವೆ ಹಾಗೂ ಪ್ಲಾಂಟೇಶನ್‌ಗಳ ಅನಧಿಕೃತ ವಿಸ್ತರಣೆಗೆ ನಿಯಂತ್ರಣ ಇಲ್ಲದಂತಾಗಿದೆ. ಈ ಮಳೆಗಾಲದ ಆರಂಭದಲ್ಲೇ ಶಿರೂರು ಮತ್ತು ಶಿರಾಡಿಯಲ್ಲಿ ಸಂಭವಿಸಿರುವ ಭೂಕುಸಿತಗಳು ಎಚ್ಚರಿಕೆಯ ಗಂಟೆಯಂತಿವೆ. ವಯನಾಡ್‌ನಲ್ಲಿನ ದುರಂತವಂತೂ ನಮ್ಮ ನಿರ್ಲಕ್ಷ್ಯಕ್ಕೆ ಪರಿಸರವೇ ನೀಡಿರುವ ತಪರಾಕಿಯಂತಿದೆ. ಈ ದುರಂತಗಳಿಂದ ಸದ್ಯಕ್ಕೆ ಎಚ್ಚೆತ್ತುಕೊಂಡು ಸೂಚನೆ ನೀಡಿರುವ ರಾಜ್ಯ ಸರ್ಕಾರ, ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಒತ್ತುವರಿ ತೆರವಿಗೆ ಕಾರ್ಯಪಡೆ ರಚಿಸಲು ಮುಂದಾಗಿದೆ.

2015ರ ನಂತರದ ಹೊಸ ಒತ್ತುವರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು ಎಂದು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಪ್ರತಿ ವರ್ಷ 10 ಕೋಟಿ ಸಸಿಗಳನ್ನು ನೆಡುವ ಉದ್ದೇಶವನ್ನೂ ಸರ್ಕಾರ ಹೊಂದಿದೆ. ಇವೆಲ್ಲವೂ ಅಗತ್ಯವಾಗಿದ್ದ ಕ್ರಮಗಳೇ. ಈ ಉತ್ಸಾಹ ಆರಂಭಿಕ ಶೂರತ್ವ ಅಥವಾ ಪ್ರಾಕೃತಿಕ ದುರಂತ ಸಂದರ್ಭಕ್ಕೆ ತಕ್ಷಣದ ಪ್ರತಿಕ್ರಿಯೆಯಷ್ಟೇ ಆಗಬಾರದು. ಪ್ರತಿ ಬಾರಿ ಪ್ರಾಕೃತಿಕ ದುರಂತಗಳು ಸಂಭವಿಸಿದಾಗಲೆಲ್ಲ ಪರಿಸರ ಕಾಳಜಿಯ ಚಿಂತನೆ ಸರ್ಕಾರ ಹಾಗೂ ಸಮಾಜದಲ್ಲಿ ಕಾಣಿಸುತ್ತದೆ. ನಂತರದ ದಿನಗಳಲ್ಲಿ ಎಂದಿನಂತೆ ಪರಿಸರವನ್ನು ನಿರ್ಲಕ್ಷಿಸುವ ಚಟುವಟಿಕೆಗಳೇ ಮುಂದುವರೆಯುತ್ತವೆ. ಈ ಬಾರಿ ಹಾಗಾಗದೆ, ಅರಣ್ಯ ಒತ್ತುವರಿ ತೆರವಿಗೆ ರೂಪುಗೊಳ್ಳುವ ಕಾರ್ಯಪಡೆ ರಾಜಕೀಯ ಪ್ರಭಾವಗಳಿಗೆ ಒಳಗಾಗದಂತೆ ಮುಕ್ತವಾಗಿ ಕಾರ್ಯನಿರ್ವಹಿಸಲು ಸರ್ಕಾರ ಅವಕಾಶ ಕಲ್ಪಿಸಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ನನೆಗುದಿಗೆ ಬಿದ್ದಿರುವ ಮಾಧವ ಗಾಡ್ಗೀಳ್ ಹಾಗೂ ಕಸ್ತೂರಿ ರಂಗನ್ ವರದಿಗಳ ದೂಳು ತೆಗೆಯುವ ಕೆಲಸ ಇನ್ನಾದರೂ ಆರಂಭಗೊಳ್ಳಬೇಕು. ಪಶ್ಚಿಮ ಘಟ್ಟಗಳ ಸಂರಕ್ಷಣೆಯ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ನೀಡಲಾಗಿರುವ ಈ ವರದಿಗಳಲ್ಲಿ ಸೂಕ್ತವಾದುದನ್ನು ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ಇಚ್ಛಾಶಕ್ತಿ ತೋರಬೇಕಾಗಿದೆ.

ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ತನ್ನ ಹೊಣೆಗಾರಿಕೆ ನೆನಪಾಗಲು ಪ್ರಾಕೃತಿಕ ದುರಂತಗಳು ನಡೆಯಲೇಬೇಕು ಎನ್ನುವ ಸ್ಥಿತಿ ಇನ್ನು ಮೇಲಾದರೂ ಕೊನೆಯಾಗಬೇಕು. ಹಳೆಯ ತಪ್ಪುಗಳು ಮುಂದುವರೆಯದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು. ಪರಿಸರ ಸಂರಕ್ಷಣೆ ವರ್ತಮಾನದ ಅಗತ್ಯ ಮಾತ್ರವಲ್ಲ, ನಾಳೆಯ ತಲೆಮಾರುಗಳ ಭವಿಷ್ಯಕ್ಕಾಗಿ ನಾವು ಇಂದು ನಿರ್ವಹಿಸಲೇಬೇಕಾದ ಹೊಣೆಗಾರಿಕೆ.

■ **ರಘುನಾಥ ಚ.ಹ.**



ಈಶ್ವರ್